**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ.17/2022

ಪಿ.ಡಬ್ಲ್ಯೂಃ 6

ಸಿಡಬ್ಲ್ಯೂ-10

ಸಾಕ್ಷಿದಾರರ ಹೆಸರು : ವಿನಾಯಕ ಪ್ರಕಾಶ ನಾಯ್ಕ

ತಂದೆಯ ಹೆಸರು : ಪ್ರಕಾಶ ನಾಯ್ಕ

ವಯಸ್ಸು : 42 ವರ್ಷ

ಉದ್ಯೋಗ : ವಲಯ ಅರಣ್ಯಾಧಿಕಾರಿ , ಗೋಪಶಿಟ್ಟಾ

ವಾಸ : ಕಾಜುಬಾಗ , ಕಾರವಾರ

ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ.ಸ. ಆ ರವರಿಂದ ಃ**

1. ನಾನು ದಿನಾಂಕಃ 12-07-2019 ರಿಂದ ದಿನಾಂಕಃ 06-04-2022 ರ ತನಕ ಅಂಕೋಲಾ ವಲಯದಲ್ಲಿ ವಲಯಾರಣ್ಯಾಧಿಕಾರಿ ಕಾರ್ಯ ನಿರ್ವಹಿಸಿದ್ದೇನೆ.

**2**. ದಿಃ 17-08-2020 ರಂದು ಅಂಕೋಲಾ ವಲಯದ ಈ ಪ್ರಕರಣದಲ್ಲಿ ಜಪ್ತು ಪಡಿಸಿದ ಕಡವೆ ಮಾಂಸ, ಸತ್ತ ಕಡವೆಯ ಭ್ರೂಣದಲ್ಲಿದ್ದ ಶಿಶು, ಕಡವೆಯ ತಲೆ , ಕಡೆಯ ಚರ್ಮ ಮತ್ತು ಕಡವೆಯ ನಾಲ್ಕು ಕಾಲುಗಳು ಕೊಳೆತು ಹಾಳಾಗುವಂತದ್ದು ಆಗಿದ್ದುದರಿಂದ , ತನಿಖಾಧಿಕಾರಿಯಾದ ಚಾಸಾ-11 ರವರು ಈ ನ್ಯಾಯಾಲಯದಿಂದ ಅವುಗಳನ್ನು ವಿಲೇವಾರಿ ಮಾಡಲು ಅನುಮತಿ ಪಡೆದಿದ್ದರು. ಸದ್ರಿ ಜಪ್ತು ಪಡಿಸಿದ ವಸ್ತುಗಳನ್ನು ದಹನ ಮಾಡಿ, ವಿಲೇವಾರಿ ಮಾಡಲು , ಪಂಚರಾದ ಚಾಸಾ -2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10-00 ಗಂಟೆಯಿಂದ 11-00 ರವರೆಗೆ ದಹನ ಮಾಡಿರುತ್ತೇವೆ. ಆ ಬಗ್ಗೆ ಪಂಚನಾವೆಯನ್ನು ಜರುಗಿಸಿರುತ್ತೇವೆ. ಅಲ್ಲದೇ ಫೊಟೊ ತೆಗೆದಿದ್ದು , ವಿಡಿಯೋ ಕೂಡ ಮಾಡಲಾಗಿದೆ. ಷದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-20

(ಡಿ) ಎಂದು ಗುರುತಿಸಲಾಯಿತು. ಫೋಟೊಗಳನ್ನು ನೋಡುತ್ತಿದ್ದು , ಅವುಗಳನ್ನು ಈಗಾಗಲೇ ನಿಪಿ-21 ರಿಂದ 25 ಎಂದು ಗುರುತಿಸಲಾಗಿದೆ.

**3**. ದಿಃ 29-09-2020 ರಂದು ಈ ಪ್ರಕರಣದಲ್ಲಿ ಜಪ್ತು ಪಡಿಸಿದ ಸಿಂಗಲ್ ಬ್ಯಾರಲ್ ಗನ್ ಸಿಡಿ ಮದ್ದಿನಿಂದ ಲೋಡಾಗಿದ್ದು , ತನಿಖಾಧಿಕಾರಿ ಚಾಸಾ -11 ರವರು ಜಿಲ್ಲಾ ಸಶಸ್ತ್ರ ಮೀಸಲುಪಡೆ ಕಾರವಾರ ರವರಿಂದ ಸದ್ರಿ ಗನ್ ವನ್ನು ಅನ್ ಲೋಡ್ ಮಾಡಲು ಸಿಬ್ಬಂದಿ ನೇಮಿಸಲು ಕೋರಿದಂತೆ , ಚಾಸಾ 9 ರವರನ್ನು ಸಹಾಯಕ ಅರಣ್ಯಾಸಂರಕ್ಷಣಾಧಿಕಾರಿ ಕಚೇರಿ, ಅಂಕೋಲಾದಲ್ಲಿ ಹಾಜರಿದ್ದರು. ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಸದ್ರಿ ಗನ್ ವನ್ನು ಅನ್ ಲೋಡ್ 4 ಸಿಸದ ತುಂಡುಗಳು , 5 ಗ್ರಾಂ ಆಗುವಷ್ಟು ಗನ್ ಪೌಡರ್ ವನ್ನು ನೀಡಿರುತ್ತಾರೆ. ಮಧ್ಯಾಹ್ನ 12-30 ರಿಂದ 1-00 ಗಂಟೆಯ ತನಕ ಆ ಬಗ್ಗೆ ಪಂಚನಾಮೆ ಜರುಗಿಸಲಾಗಿದೆ. ಈ ಬಗ್ಗೆ ಫೋಟೊ ತೆಗೆಯಲಾಗಿದೆ. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-26 (ಇ) ಎಂದು ಗುರುತಿಸಲಾಯಿತು. ಫೋಟೊವನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿದೆ. ಸದ್ರಿ ಸಿಂಗಲ್ ಲೋಡೆಡ್ ಬ್ಯಾರಲ್ ಗನ್ ವನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ಮು.ಮಾ-3 ಎಂದು ಗುರುತಿಸಲಾಗಿದೆ.

**4**. ದಿಃ 07-12-2020 ರಂದು ತನಿಖಾಧಿಕಾರಿಗಳು ತನಿಖೆಯ ವೇಳೆಯಲ್ಲಿ ಜಪ್ತು ಪಡಿಸಿದ ವಸ್ತು ಗಳಿಂದ ಪರೀಕ್ಷೆಗಾಗಿ ಆಯ್ಕೆ ಮಾಡಿದ 7 article ಗಳನ್ನು ಪಂಚರಾದ ಚಾಸಾ -2 ಮತ್ತು 3 ರವರ ಸಮಕ್ಷಮ ಮಾದರಿ ತೆಗೆದರು. ಅವುಗಳ ಪೈಕಿ ಮೊದಲನೆಯದು ಗುಂಡು ತಗಲಿದ ಚರ್ಮದ ಭಾಗ , ಎರಡನೆಯದ್ದು ಮಾದರಿ ಚರ್ಮ, ಮೂರನೆಯದ್ದು ಸಿಂಗಲ್ ಬ್ಯಾರಲ್ ಗನ್ , ನಾಲ್ಕನೆಯದ್ದು ಸೀಸದ ಗುಂಡು ಮತ್ತು ಗನ್ ಪೌಡರ್, ಐದನೆಯದ್ದು 1ನೇ ಆರೋಪಿಯ ಉಗುರುಗಳು, ಆರನೆಯದ್ದು 2 ನೇ ಆರೋಪಿಯ ಉಗುರುಗಳು ಹಾಗೂ ಏಳನೆಯದ್ದು 3 ನೇ ಆರೋಪಿಯ ಉಗುರುಗಳಾಗಿರುತ್ತವೆ. ಆ ಬಗ್ಗೆ ಪಂಚನಾಮೆ ಜರುಗಿಸಲಾಗಿದೆ. ಆ ಪಂಚನಾಮೆಯನ್ನು ತನಿಖಾಧಿಕಾರಿಗೆ ನೀಡಿದ್ದು, ಅದನ್ನು ಅವರು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ. ಆ 7 article ಗಳನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ</u> ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ**

5. ನಾನು ಮೇಲೆ ಹೇಳಿದಂತಹ ಮುಖ್ಯ ವಿಚಾರಣಾ ಸಂಗತಿಗಳನ್ನು ಹೇಳಲು ಒಂದು ಪುಟದಷ್ಟು ನೋಟ್ಸ ಮಾಡಿಕೊಂಡು ಬಂದು ನೋಡಿ ಹೇಳಿರುವುದು ಎಂದರೆ ಸರಿ. ತನಿಖಾಧಿಕಾರಿಗೆ ಕಡತವನ್ನು ನೋಡಿ ಸಾಕ್ಷಿ ನುಡಿಯಲು ಅನುಮತಿ ಇದೆ ಎಂದರೆ ಸರಿ. ಸಾಕ್ಷಿ ದಾರರಿಗೆ ಕಡತವನ್ನು ನೋಡಿ ಯಾಗಲಿ ನೋಟ್ಸ ತಯಾರಿಸಿಕೊಂಡು ಬಂದು ನೋಡಿ ಹೇಳಲು ಅನುಮತಿ ಇಲ್ಲ ಎಂದರೆ ಸಾಕ್ಷಿ ನಾನು ತನಿಖಾಧಿಕಾರಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಚಾಸಾ –11 ರವರು ತನಿಖಾಧಿಕಾರಿಯಾಗಿರುತ್ತಾರೆ. ಈ ಪ್ರಕರಣದಲ್ಲಿ ನನ್ನನ್ನು ತನಿಖಾಧಿಕಾರಿ ಎಂದು ತೋರಿಸಿದ್ದು ಇಲ್ಲ ಎಂದರೆ ಸರಿಯಲ್ಲ. ಕಡತವನ್ನು ನೋಡಿ ನನ್ನನ್ನು ತನಿಖಾಧಿಕಾರಿಯಾಗಿ ಈ ಪ್ರಕರಣದಲ್ಲಿ ನೇಮಿಸಲಾಗಿತ್ತಾ ಎಂದು ಹೇಳಬಹುದಾ ಎಂದರೆ ಸಾಕ್ಷಿ ಕಡತ ನೋಡಿ ತನಿಖಾಧಿಕಾರಿ ಎಂದು ತೋರಿಸಿಲ್ಲ ಹಾಗೂ ತೋರಿಸುವಲ್ಲಿ ತಪ್ಪಾಗಿರಬಹುದು ಎಂದು ನುಡಿಯುತ್ತಾರೆ. ನಾನು ಈ ಪ್ರಕರಣದಲ್ಲಿ ಸಾಕ್ಷಿ ದಾರ ವಿನಃ ತನಿಖಾಧಿಕಾರಿ ಅಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.